# ಆದರ್ಶ ಕುಟುಂಬ

**ಆ**ದರ್ಶ ಕುಟುಂಬದ ಪ್ರಮುಖ ಲಕ್ಷಣಗಳೆಂದರೆ, ನಿಸ್ವಾರ್ಥತೆ ಮತ್ತು ಪರಿಶುದ್ಧ ಪ್ರೀತಿ. ಒಂದು ಸುಂದರ ಕುಟುಂಬಕ್ಕೆ ಉದಾಹರಣೆಯೆಂದರೆ ಜೇನುಗೂಡು. ಜೇನುಗೂಡಿನಲ್ಲಿ ಜೇನಿನ ಹುಳುಗಳು ಹೊಂದಿಕೊಂಡು ಜೀವನ ನಡೆಸುತ್ತವೆ; ನೋವುನಲಿವುಗಳನ್ನು ಸಮನಾಗಿ ಹಂಚಿಕೊಳ್ಳುತ್ತವೆ. ಹಾಗೆಯೇ ಕುಟುಂಬದ ಸದಸ್ಯರೆಲ್ಲರೂ ಅನ್ಯೋನ್ಯವಾಗಿ ಪ್ರೀತಿಯಿಂದ ನಡೆದುಕೊಂಡು, ಕುಟುಂಬವು ಒಡೆಯದಂತೆ ನೋಡಿಕೊಳ್ಳಬೇಕು. **– ಸಿದ್ಧನಗೌಡ ಚ. ಬಿರಾದಾರ, ಬಿಜಾಪುರ**

**ಕೌ**ಟುಂಬಿಕ ಜೀವನದಲ್ಲಿ ದಾಂಪತ್ಯ ಒಂದು ಮುಖ್ಯ ಘಟ್ಟ. ಅನ್ಯೋನ್ಯ ದಾಂಪತ್ಯದ ಆದರ್ಶ ಕುಟುಂಬದ ಭದ್ರ ಬುನಾದಿ. ಅದರಿಂದ ಮಾತ್ರ ಕುಟುಂಬದಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ಪಡೆಯಲು ಸಾಧ್ಯ. ನಮ್ಮ ದೇಶದಲ್ಲಿ, ದಾಂಪತ್ಯ ಜೀವನಕ್ಕೆ ಆಧ್ಯಾತ್ಮಿಕ ಹಿನ್ನೆಲೆ ಇದ್ದು, ಹೆಣ್ಣು ಶಕ್ತಿಯ ರೂಪವೆಂದು ಪರಿಗಣಿಸಲ್ಪಟ್ಟಿದ್ದಾಳೆ. ಶ್ರೀರಾಮಕೃಷ್ಣರ ಮತ್ತು ಶ್ರೀಶಾರದಾಮಾತೆಯವರ ದಾಂಪತ್ಯವೇ ಇದಕ್ಕೆ ಅತ್ಯುತ್ತಮ ನಿದರ್ಶನ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಭಾರತದಲ್ಲಿ ಆದರ್ಶ ಸ್ತ್ರೀ ಎಂದರೆ ತಾಯಿ, ತಾಯಿಯೇ ಮೊದಲು, ತಾಯಿಯೇ ಕೊನೆ." ಹೀಗೆ ಮಾತೃತ್ವದ ಆದರ್ಶವನ್ನು ಕೇಂದ್ರವಾಗಿಟ್ಟುಕೊಂಡಿರುವ ಕುಟುಂಬ ಆದರ್ಶ ಕುಟುಂಬವಾಗಬಲ್ಲದು.

**– ಪ್ರೊ. ಶಂಕರ ಕೆ. ಸೀರಿ, ಬೆಂಗಳೂರು**

**ಕು**ಟುಂಬದಲ್ಲಿ ಇರುವ ಹಿರಿಯ ವ್ಯಕ್ತಿಯು ಎಲ್ಲರಿಗೂ ಆದರ್ಶವಾಗಿರಬೇಕು. ಹಾಗೆಯೇ ಒಂದು ಆದರ್ಶ ಕುಟುಂಬವನ್ನು ನೋಡಿ, ಇನ್ನೊಂದು ಕುಟುಂಬ ಪಾಠವನ್ನು ಕಲಿಯಬೇಕು. ಆದರ್ಶವಾಗಿ ಬದುಕುವ ಮನುಷ್ಯನು ಬೇರೆಯವರಲ್ಲಿರುವ ಒಳ್ಳೆಯತನವನ್ನು ನೋಡಿ ಕಲಿಯುತ್ತಾನೆ. ಹಾಗೆಯೇ ಇವನನ್ನು ನೋಡಿ, ಬೇರೆಯವರೂ ಒಳ್ಳೆಯ ಗುಣಗಳನ್ನು ಕಲಿಯುತ್ತಾರೆ. ಹೀಗೆಯೇ ಕುಟುಂಬಗಳ ವಿಷಯದಲ್ಲಿ ಕೂಡ. ಒಂದು ಕುಟುಂಬ ಇನ್ನೊಂದು ಕುಟುಂಬಕ್ಕೆ ಎಲ್ಲ ರೀತಿಯ ನೆರವು ನೀಡುವ ಮೂಲಕ ಆದರ್ಶ ಕುಟುಂಬಗಳಾಗಬಹುದು.

**– ಬಿ. ಮಹೇಶ್ವರಿ, ೧೦ ನೇ ತರಗತಿ**

**ಕು**ಟುಂಬ ಎನ್ನುವುದು ಸಮಾಜದ ಮೂಲಭೂತ ಘಟಕ. ಇದು ಸಶಕ್ತವಾಗಿದ್ದಲ್ಲಿ, ದೇಶವೂ ಕೂಡ ಸುದೃಢವಾಗಿರುತ್ತದೆ. ಕುಟುಂಬವು ಆರ್ಥಿಕ, ನೈತಿಕ, ಧಾರ್ಮಿಕ – ಈ ಎಲ್ಲ ಕ್ಷೇತ್ರಗಳಲ್ಲೂ ತನ್ನ ಸದಸ್ಯರಿಗೆ ಮಾರ್ಗದರ್ಶಕವಾಗಿರಬೇಕು. ಪ್ರೀತಿ ಎಂಬ ಮಧುರ ಬಂಧನವು ಪರಸ್ಪರರನ್ನು ಬೆಸೆಯಬೇಕು. ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಒಟ್ಟು ಕುಟುಂಬದ ಏಳಿಗೆಗಾಗಿ ನಿಸ್ವಾರ್ಥದಿಂದ ದುಡಿಯಬೇಕು. ಹೀಗೆ ಪ್ರತಿಯೊಂದು ಕುಟುಂಬವೂ ಆದರ್ಶವಾಗಿ ಬಾಳಿದರೆ, ಲೋಕಕಲ್ಯಾಣವಾಗುವುದು. **–ಜಯಪ್ರಕಾಶ ನಾಯಕ, ದೊಡ್ಡಮನೆ, ಉಡುಪಿ ಜಿಲ್ಲೆ**

**ದೂ**ರದ ಬೆಟ್ಟ ನುಣ್ಣಗೆ ಎಂಬ ನಾಣ್ಣುಡಿಯಂತೆ, ನಾವು ಕುಟುಂಬದ ಬಗ್ಗೆ ಹಲವಾರು ಕಲ್ಪನೆಗಳನ್ನು ಇಟ್ಟುಕೊಂಡಿದ್ದರೂ, ಇಂದಿನ ಅವಸರದ ಯುಗದಲ್ಲಿ ಅನೇಕ ಸಮಸ್ಯೆಗಳು ಸಮಾಜದ ಪ್ರತಿಯೊಬ್ಬ ಕುಟುಂಬಸ್ಥನನ್ನೂ ಹೈರಾಣಾಗಿಸುತ್ತಿವೆ. ಹೀಗಾಗಿ ಪ್ರಸ್ತುತ ನಮಗೆ ಅಗತ್ಯವಾಗಿ ಬೇಕಾಗಿರುವುದು, ನಿಸ್ವಾರ್ಥ ಕರ್ಮ. ಖ್ಯಾತ ರಂಗಕರ್ಮಿ ಶ್ರೀ ಪ್ರಸನ್ನ ನುಡಿಯುವಂತೆ, 'ಮಾಡು, ಮಾಡಿಟ್ಟು ಮುಂದೆ ಸಾಗು' ಎಂಬ ಕರ್ತವ್ಯ ಮನೋಭಾವ ನಮ್ಮದಾಗಬೇಕು. ನಾವು ಮಾಡುವ ಪ್ರತಿ ಕೆಲಸವೂ ಪರರಿಗೆ ದಾರಿದೀಪವಾಗುವಂತಿರಬೇಕು. ಈ ಹಂತ ತಲುಪಬೇಕಾದರೆ ಸ್ವಾರ್ಥತ್ಯಾಗದಿಂದ ಮಾತ್ರ ಸಾಧ್ಯ. ಆಗ ಮಾತ್ರ ಆದರ್ಶ ಕುಟುಂಬದ ವ್ಯಾಖ್ಯಾನಕ್ಕೆ ಅರ್ಥ ಬರುತ್ತದೆ.

ಉದಾಹರಣೆಗೆ, ಕುಟುಂಬದ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವುದು ಕುಟುಂಬದ ಸಾಮರಸ್ಯಕ್ಕೆ ನಿದರ್ಶನವಾಗಬಲ್ಲುದು. ಹೀಗೆ ಎಲ್ಲ ವಿಷಯಗಳಲ್ಲಿಯೂ ಸೂಕ್ಷ್ಮ ಸಂಗತಿಗಳಿಗೆ ಗಮನ ಕೊಡಬೇಕು. ಅದರಂತೆ, ಹಿರಿಯರಿಗೆ ಗೌರವ ನೀಡುವ ಸಂಸ್ಕಾರವನ್ನು ಕಿರಿಯರಲ್ಲಿ ಬೆಳೆಸಬೇಕು. ಅದಕ್ಕಾಗಿ ಒಳ್ಳೆಯ ನಡವಳಿಕೆಗಳನ್ನು ಚಿಕ್ಕಂದಿನಿಂದಲೇ ಬೋಧಿಸುವುದು ಕುಟುಂಬದ ಹಿರಿಯರ ಆದ್ಯ ಕರ್ತವ್ಯ. ಈ ಕರ್ತವ್ಯವನ್ನು ಅವರು ಸರಿಯಾಗಿ ನಿಭಾಯಿಸಿದಾಗ ಮಾತ್ರವೇ ಆ ಕುಟುಂಬ ಆದರ್ಶ ಕುಟುಂಬವಾಗಬಲ್ಲುದು.

ಇವೆಲ್ಲಕ್ಕೂ ತಿಲಕವಿಟ್ಟಂತೆ, ಆದರ್ಶ ಕುಟುಂಬದಲ್ಲಿ ಶೋಭಾಯಮಾನವಾಗಿ ಕಾಣುವ ಲಕ್ಷಣವೆಂದರೆ ಪ್ರಾಮಾಣಿಕತೆ. ಚಿಕ್ಕವರಿರಲಿ, ದೊಡ್ಡವರಿರಲಿ, ಕುಟುಂಬದ ಪ್ರತಿಯೊಬ್ಬ ಸದಸ್ಯನ ಪಾತ್ರವೂ ಮಹತ್ವದ್ದೇ ಆಗಿದೆ. ಆದ್ದರಿಂದ ಎಲ್ಲರ ಪಾತ್ರವನ್ನೂ ಪ್ರಾಮಾಣಿಕತೆಯಿಂದ ಒಪ್ಪಿಕೊಂಡು ಆದರಿಸುವ ಗುಣ ಬಹಳ ಮುಖ್ಯ.

**– ಜಾವಗಲ್ಲು ಕೃಷ್ಣಶರ್ಮ, ಜಾವಗಲ್ಲು**

**ನ**ನ್ನ ಸ್ನೇಹಿತರೊಬ್ಬರು ಬೆಳಗಿನ ಜಾವ ವಾಯುವಿಹಾರಕ್ಕೆ ಹೋದಾಗ, ಒಬ್ಬ ವೃದ್ಧ ದಂಪತಿಗಳು ಪರಸ್ಪರ ಮಾತನಾಡಿಕೊಳ್ಳುವುದನ್ನು ಕೇಳಿಸಿಕೊಂಡರು. ಅವರ ಮಗ ಅವರಿಗೆ, "ನೀವು ನನ್ನನ್ನೇಕೆ ಹುಟ್ಟಿಸಿದಿರಿ?" ಎಂದು ಕೇಳಿದನಂತೆ. ಇದು ಆ ವೃದ್ಧ ದಂಪತಿಗಳಿಗೆ ಬಹು ನೋವನ್ನು ಉಂಟುಮಾಡಿತ್ತು. ಅವರದೇನು, ಈಗಿನ ಎಲ್ಲ ವೃದ್ಧರ ಕಥೆಯೂ ಹೆಚ್ಚೂ ಕಡಿಮೆ ಇದೇನೇ. ಇದಕ್ಕೆ ಕಾರಣ ಒಟ್ಟು ಕುಟುಂಬದ ಆದರ್ಶವೇ ಮಾಯವಾಗುತ್ತಿರುವುದು.

ಅವಿಭಾಜ್ಯ ಅಥವಾ ಒಟ್ಟು ಕುಟುಂಬ ಭಾರತದ ವಿಶೇಷತೆ. ಅಲ್ಲಿ ವಿವಿಧತೆಯಲ್ಲಿ ಏಕತೆಯ ಭಾವ ಕಾಣುತ್ತಿತ್ತು. ತ್ಯಾಗ ಮತ್ತು ಪ್ರೀತಿಗಳು ಅಲ್ಲಿನ ಸದಸ್ಯರನ್ನು ಒಂದಾಗಿ ಕಟ್ಟಿ ಹಾಕಿದ್ದವು. ಮನೆಯ ಸದಸ್ಯರೆಲ್ಲರೂ ನಮ್ಮವರೇ, ಅವರ ಸುಖ ದುಃಖ ನಮ್ಮದು ಎಂಬ ಮನೋಭಾವ ಮನೆಯ ಪ್ರತಿಯೊಬ್ಬ ಸದಸ್ಯನಲ್ಲಿಯೂ ಇತ್ತು. ವಿರಸಗಳಿರಲಿಲ್ಲ ಎಂದೇನಲ್ಲ, ಆದರೆ ಪ್ರೀತಿಯ ಬಂಧನ ಅವು ಹೆಡೆಯೆತ್ತಲು ಬಿಡುತ್ತಿರಲಿಲ್ಲ. ಕುಟುಂಬದಲ್ಲಿ ನಲಿವಿತ್ತು, ಸಮಾಧಾನ ನೆಲೆಸಿತ್ತು, ತೃಪ್ತಿ ಇತ್ತು. ತಂಟೆತಗಾದೆಗಳಿದ್ದರೂ ಅವು ಅಲ್ಲಲ್ಲೇ ಅಡಗಿ ಹೋಗುತ್ತಿದ್ದವು. ಹಿರಿಯರಲ್ಲಿ ಗೌರವ ಭಾವವಿತ್ತು, ವೃದ್ಧರಿಗೆ ಅನಾಥ ಪ್ರಜ್ಞೆ ಇರಲಿಲ್ಲ. **ಇದು ಆದರ್ಶ ಕುಟುಂಬದ ಸಂಕ್ಷಿಪ್ತ ದರ್ಶನ.**

ಈಗ ಈ ಬಗೆಯ ಕುಟುಂಬಗಳು ಮಾಯವಾಗುತ್ತಿವೆ. ಗಂಡ-ಹೆಂಡತಿ ಮಕ್ಕಳು, ಇಷ್ಟೆ – ಈಗಿನ ಕುಟುಂಬದ ವ್ಯವಸ್ಥೆ. ವೃದ್ಧ ತಂದೆತಾಯಿಯರಿಗೂ ಇಲ್ಲಿ ಆಶ್ರಯ ಸಿಗುತ್ತಿಲ್ಲ. ಆದ್ದರಿಂದಲೇ ವೃದ್ಧಾಶ್ರಮಗಳು ತಲೆಯೆತ್ತುತ್ತಿವೆ. ವಾರವೆಲ್ಲ ದುಡಿತ, ವಾರದ ಕೊನೆಗೆ ಮೋಜು. ಸದಾ ಮಾನಸಿಕ ಒತ್ತಡ, ಹಣ ಗಳಿಸುವ ಯೋಚನೆಯೇ ಪ್ರಮುಖ. ಇದು ಇಂದಿನ ಕುಟುಂಬದ ಸ್ಥಿತಿ. ದುಡಿವ ಗಂಡಹೆಂಡತಿಯರಿಗೆ ತಮ್ಮ ಮಕ್ಕಳನ್ನು ನೋಡಿಕೊಳ್ಳಲು ಮಾತ್ರ ತಂದೆತಾಯಿಯರು ಬೇಕು. ಅವರಿಲ್ಲದಿದ್ದರೆ ಮಕ್ಕಳೂ ಒಂದು ರೀತಿಯಿಂದ ಅನಾಥರೇ. ತಾಯಿಯ ಮಮತೆಯ ಮಡಿಲಲ್ಲಿ ಸರಿಯಾಗಿ ಬೆಳೆಯದ ಮಕ್ಕಳು ಸಂಬಂಧಗಳ ಅರಿವನ್ನು ಹೇಗೆ ತಾನೇ ಉಳಿಸಿಕೊಂಡಾರು?

'ಜೀವರನ್ನು ಶಿವರೆಂದು ಭಾವಿಸಿ ಸೇವೆ ಮಾಡಿ' ಎನ್ನುವುದು ಶ್ರೀರಾಮಕೃಷ್ಣರ ಅಮೃತ ನುಡಿ. ಇದು ರಾಮಕೃಷ್ಣ ಆಶ್ರಮಗಳ ಮೂಲ ಮಂತ್ರ ಕೂಡ. ಎಲ್ಲ ಕಡೆಗೂ ವ್ಯಾಪಕವಾಗಿ ಅನ್ವಯವಾಗುವ ಈ ಮಹಾವಾಕ್ಯವನ್ನು ಕುಟುಂಬ ವ್ಯವಸ್ಥೆಯಲ್ಲಿ ಏಕೆ ಅನುಷ್ಠಾನಕ್ಕೆ ತರಬಾರದು? ಕುಟುಂಬದ ಸದಸ್ಯರು ಪರಸ್ಪರ ಆಧ್ಯಾತ್ಮಿಕ ದೃಷ್ಟಿಯಿಂದ ನೋಡಲು ಕಲಿಯಬೇಕು, ಇತರರಲ್ಲಿ ಭಗವಂತನ ಅಂಶವನ್ನು ಗುರುತಿಸಲು ಅಭ್ಯಾಸ ಮಾಡಬೇಕು. ಆಗ ಮಾತ್ರ ಪ್ರೀತಿ ಗೌರವಗಳ ಸೂತ್ರ ಕುಟುಂಬದ ಎಲ್ಲರನ್ನೂ ಕಟ್ಟಿಹಾಕುತ್ತದೆ.

ಇದನ್ನು ಸಾಧಿಸುವುದು ಹೇಗೆ? ಅದಕ್ಕಾಗಿ ಮಕ್ಕಳಿಗೆ ಬಾಲ್ಯದಿಂದಲೇ ಅಧ್ಯಾತ್ಮದ ಅರಿವು ಮೂಡಿಸಬೇಕಾಗುತ್ತದೆ; ನಮ್ಮ ಹಿಂದಿನ ಮಹಾತ್ಮರ ಜೀವನ ಚರಿತ್ರೆಗಳ ಪರಿಚಯ ಮಾಡಿಕೊಡಬೇಕಾಗುತ್ತದೆ. ಮೇಲೆ ಉದ್ಧರಿಸಿದ ಶ್ರೀರಾಮಕೃಷ್ಣರ ವಾಕ್ಯವು ಕುಟುಂಬದ ಬೀಜಮಂತ್ರವಾಗಬೇಕು. ಇದು ಮತ್ತೊಮ್ಮೆ ಆದರ್ಶ ಕುಟುಂಬಗಳ ಉದಯಕ್ಕೆ ಕಾರಣವಾದೀತು. –ಸದಾಶಿವ ಹಿರೇಮಠ, ಧಾರವಾಡ

ಇಂದಿನ ತಾಂತ್ರಿಕ ಯುಗದಲ್ಲಿ ಸಮಾಜದಲ್ಲಿ ಕುಟುಂಬ ವ್ಯವಸ್ಥೆ ಸರಿಯಾಗಿರಬೇಕಾದರೆ, ಕುಟುಂಬದ ಎಲ್ಲ ಸದಸ್ಯರೂ ಒಗ್ಗಟ್ಟಾಗಿ ಶ್ರಮಿಸಬೇಕಾಗುತ್ತದೆ; ಪರಸ್ಪರ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಪ್ರೀತಿ ವಿಶ್ವಾಸಗಳಿಂದ ನಡೆದುಕೊಳ್ಳಬೇಕಾಗುತ್ತದೆ. ಕುಟುಂಬದಲ್ಲಿ ಸಿರಿತನವಿರಲಿ ಅಥವಾ ಬಡತನವಿರಲಿ, ಆಯಾ ಸನ್ನಿವೇಶ ಸಂದರ್ಭಗಳಿಗೆ ಅನುಸಾರವಾಗಿ ಹೊಂದಿಕೊಂಡು ಜೀವನ ನಡೆಸಬೇಕಾಗುತ್ತದೆ. ಅದಲ್ಲದೆ, ಕುಟುಂಬದ ಸದಸ್ಯರೆಲ್ಲರೂ ಮಾನವೀಯ ಗುಣಗಳನ್ನು ಬೆಳೆಸಿಕೊಂಡು, ಶಿಸ್ತು ಸಂಯಮಗಳನ್ನು ಕಾಪಾಡಿಕೊಳ್ಳಬೇಕು. ದೇವರಲ್ಲಿ ನಂಬಿಕೆ, ಸತ್ಯಧರ್ಮಗಳ ಪರಿಪಾಲನೆ, ಕರ್ತವ್ಯಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವುದು, ಸಮಸ್ಯೆಗಳನ್ನು ತಾಳ್ಮೆಯಿಂದ ಪಕ್ಷಪಾತವಿಲ್ಲದೆ ಬಗೆಹರಿಸುವುದು, ಕಿರಿಯರಿಗೆ ಪ್ರೀತಿವಿಶ್ವಾಸಗಳಿಂದ ಮಾರ್ಗದರ್ಶನ ಮಾಡುವುದು, ದುಂದು ವೆಚ್ಚ ಮಾಡದೆ ಆದಾಯಕ್ಕೆ ತಕ್ಕಂತೆ ಖರ್ಚು ಮಾಡುವ ಅಭ್ಯಾಸ ಮಾಡುತ್ತ ಸರಳ ಜೀವನ ನಡೆಸುವುದು – ಇವುಗಳನ್ನು ಅನುಷ್ಠಾನಕ್ಕೆ ತರುವುದರಿಂದ ಕುಟುಂಬದಲ್ಲಿ ಹೆಚ್ಚು ಸಮಸ್ಯೆಗಳು ಉಂಟಾಗುವುದಿಲ್ಲ. ಅದಲ್ಲದೆ, ಮನೆಯವರೆಲ್ಲ ಒಟ್ಟಿಗೆ ಸೇರಿರುವ ಸಮಯದಲ್ಲಿ ಅರ್ಧ ಗಂಟೆ ಕಾಲವಾದರೂ ದೇವರ ನಾಮ ಸ್ಮರಣೆ ಮಾಡುವುದು ಒಳ್ಳೆಯದು. ಹಣವನ್ನು ನ್ಯಾಯಮಾರ್ಗದಲ್ಲಿ ಸಂಪಾದಿಸಿ, ಧರ್ಮಕ್ಕೆ ಅನುಗುಣವಾಗಿ ಉಪಭೋಗಿಸಿದರೆ ಶಾಂತಿಸಮಾಧಾನಗಳು ಲಭಿಸುತ್ತವೆ. ಇದೇ ಆದರ್ಶ ಕುಟುಂಬದ ಗುಟ್ಟು. –ಟಿ.ಎನ್. ನಾಗರತ್ನಮ್ಮ, ಮಂಡ್ಯ

ಆದರ್ಶ ಕುಟುಂಬ ಅಂದರೆ, ಸತ್ಯ, ನ್ಯಾಯ, ಧರ್ಮ, ಶಾಂತಿ – ಇವುಗಳೇ ತಳಹದಿಯಾಗಿರುವ ವ್ಯವಸ್ಥೆ. ಗೃಹಿಣಿ ಕುಟುಂಬಕ್ಕೆ ಕಣ್ಣಿದ್ದಂತೆ. ಆಕೆಯಲ್ಲಿ ಅಂತಹ ಅದ್ಭುತ ಶಕ್ತಿ ಅಡಗಿದೆ. ಆದರ್ಶ ಕುಟುಂಬದ ಕಲ್ಪನೆ ಸರ್ವಜ್ಞನ ಈ ವಚನದಲ್ಲಿ ಸೊಗಸಾಗಿ ಮೂಡಿ ಬಂದಿದೆ:

ಬೆಚ್ಚನಾ ಮನೆ ಆಗಿ, ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನ್ನರಿವ ಸತಿಯಿರಲು । ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ ॥

ಸತಿಪತಿಗಳು ಪರಸ್ಪರ ಒಬ್ಬರನ್ನೊಬ್ಬರು ಅರಿತುಕೊಂಡು ಸಹಬಾಳ್ವೆ ನಡೆಸುತ್ತಾ ಧರ್ಮಮಾರ್ಗದಲ್ಲಿ ನಡೆಯುವ ಕುಟುಂಬವೇ ಆದರ್ಶ ಕುಟುಂಬ. ಸತಿ ಪತಿವ್ರತೆ ಆಗಿರುವಂತೆ, ಪತಿಯೂ ಸತಿವ್ರತನಾಗಿರುವುದು ಆವಶ್ಯಕ. ಆದರ್ಶ ಕುಟುಂಬವನ್ನು ಅಕ್ಕ ಮಹಾದೇವಿ ತನ್ನ ಅಮೃತ ನುಡಿಗಳಿಂದ ಹೀಗೆ ಬಣ್ಣಿಸುತ್ತಾಳೆ:

ಸತ್ಯದಿಂದ ನಡೆವ ಸೊಸೆ ಚಂದವಯ್ಯ । ಅಪ್ಪಿಕೊಂಡು ನಡೆಯುವ
ಅತ್ತೆ–ಮಾವ ಚಂದವಯ್ಯ । ಸೋಸಿ ನಡೆವ ಮಗ ಚಂದವಯ್ಯ ।
ಚನ್ನಮಲ್ಲಿಕಾರ್ಜುನ ನಿನ್ನ ನಾಮ ಚಂದವಯ್ಯಾ ॥

–ಭೀಮಾಜಿ ಯಂಕಂಜಿ, ಬದಾಮಿ

(ಮುಂದುವರಿಯುವುದು)

### ಅನ್ಯೋನ್ಯ ದಾಂಪತ್ಯ

ಮನೆಯಲ್ಲಿ ವೃದ್ಧ ದಂಪತಿಗಳು. ಪತ್ನಿ ಮನೆಯ ಮುಂದೆ ಒಂದು ಕುರ್ಚಿ ಹಾಕಿಕೊಂಡು ಕುಳಿತುಕೊಂಡಿರುತ್ತಿದ್ದರು. ಕಣ್ಣಿಗೆ ಕಪ್ಪು ಕನ್ನಡಕ. ಅದೇ ಸಮಯದಲ್ಲಿ ವೃದ್ಧ ಪತಿ ಮನೆಯ ಮುಂದಿದ್ದ ಕೈದೋಟದಲ್ಲಿ ಓಡಾಡುತ್ತಾ ಗಿಡಗಳಿಗೆ ನೀರು ಹಾಕುತ್ತಿದ್ದರು. ಆ ಸಮಯದಲ್ಲಿ ಯಾವುದಾದರೂ ಒಂದು ಹಾಡನ್ನು ಗುಣುಗುಣಿಸುತ್ತಿದ್ದರು. ಅವರನ್ನು ಯಾರೋ ಒಬ್ಬರು ಕೇಳಿದರು, "ನಿಮಗೆ ಹಾಡುವುದೆಂದರೆ ತುಂಬ ಇಷ್ಟವೇ?" ಅದಕ್ಕೆ ಅವರು ಉತ್ತರಿಸಿದರು, "ಹಾಗೇನಿಲ್ಲ, ನಿಜ ಹೇಳಬೇಕೆಂದರೆ ಹಾಡುತ್ತಲೆ ಇರುವುದು ಕಷ್ಟವೇ ಸರಿ. ಆದರೆ ನಾನು ಹಾಡುವುದು ನನ್ನ ಹೆಂಡತಿಗೋಸ್ಕರವಾಗಿ." ಪ್ರಶ್ನೆ ಕೇಳಿದವರೇ ಮತ್ತೆ ಪ್ರಶ್ನಿಸಿದರು, "ನಿಮ್ಮ ಹೆಂಡತಿ ಸಂಗೀತಪ್ರಿಯರೇನು?" ಅದಕ್ಕೆ ಆ ವೃದ್ಧ ಪತಿ ಹೇಳಿದ್ದಿಷ್ಟು: " ಹಾಗೇನಿಲ್ಲ, ಆದರೆ ನನ್ನ ಹೆಂಡತಿಗೆ ಮೂರು ವರ್ಷಗಳಿಂದ ಕಣ್ಣು ಕಾಣುವುದಿಲ್ಲ. ನಾನು ಹತ್ತಿರ ಇಲ್ಲದಿದ್ದರೆ, ಗಾಬರಿ ಆಗುತ್ತಾರೆ. ನಾನು ಹಾಡುತ್ತ ಇದ್ದರೆ, ಅವರಿಗೆ ನಾನು ಹತ್ತಿರವೇ ಇದ್ದೇನೆ ಎಂಬ ಭರವಸೆ ಬರುತ್ತದೆ. ಆಗ ಅವರು ಧೈರ್ಯವಾಗಿ ಇರುತ್ತಾರೆ. ಅದಕ್ಕೋಸ್ಕರವಾಗಿಯೇ ಹಾಡುತ್ತ ಇರುತ್ತೇನೆ." – ಸಂಗ್ರಹ: ಎನ್. ವಾಸುದೇವ ಶೆಟ್ಟಿ, ಬೆಂಗಳೂರು